**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**33/2018**

ಸಿ.ಡಬ್ಲ್ಯೂ –14 ಪಿ.ಡಬ್ಲ್ಯೂ -10

| | | |
|---|---|---|
| ಹೆಸರು | ಃ | ಸಂಗೀತಾ |
| ತಂದೆಃಗಂಡ | ಃ | ಶಿವಾನಂದ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | : | ಮನೆಗೆಲಸ |
| ವಾಸಸ್ಥಳ | ಃ | ಕಡಗಂಚಿ |

ದಿನಾಂಕಃ05.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ಭಾವ, ಚಾಸಾ-2 ರಿಂದ 11 ರವರ ಪರಿಚಯ ಇರುತ್ತದೆ. ಚಾಸಾ-12 ನನ್ನ ಮಾವ, ಚಾಸಾ-13 ನನ್ನ ಅಕ್ಕ, ಮೃತ ಶಿವಾನಂದ ನನ್ನ ಗಂಡ, ಮೃತ ಶ್ರೀಶೈಲ ನನ್ನ ಮೈದುನ, 3 ನೇ ತಾರೀಖು 2017 ರಲ್ಲಿ ಬೆಳಗ್ಗೆ 6.30 ಗಂಟೆಗೆ ಪ್ರತಿದಿನ ಹೊಲಕ್ಕೆ ಹೋಗುತ್ತಿದ್ದರು. ಆ ದಿನ ಹೋಗುವಾಗ ಆರೋಪಿಯ ಕಾರು ಬಂದು ಡಿಕ್ಕಿಪಡಿಸಿರುತ್ತದೆ. ಶ್ರೀಶೈಲರರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಹಾಗೂ ನನ್ನ ಗಂಡ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಸದರಿ ಘಟನೆ 5 ನೇ ತಿಂಗಳಿನಲ್ಲಿ ನಡೆಯಿತು ಎಂದರೆ ಸರಿ. ನನ್ನ ಗಂಡ ಹಾಗೂ ಭಾವ ಹೊಗುತ್ತಿದ್ದ ವಾಹನ ಸಂಖ್ಯೆ ಕೆಎ-32/ಇಬಿ-3268 ಎಂದರೆ ಸರಿ. ಚಾಸಾ-1 ರವರಿಗೆ ಕರೆ ಬಂದ ಮೇಲೆ ನಮಗೆ ಅಪಘಾತದ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಎನಡಿಪಿ ಪೆಟ್ರೋಲ ಬಂಕ ಹತ್ತಿರ ಆಳಂದ ಕಡೆಯಿಂದ ಬರುತ್ತಿದ್ದ ಕಾರ ಸಂಖ್ಯೆ ಕೆಎ-32/ಸಿ-6448 ವಾಹನವನ್ನು ಆರೋಪಿ ಚಲಾಯಿಸಿಕೊಂಡು ಬಂದು ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ನಾನು ಆರೋಪಿಯನ್ನು ಅಪಘಾತವಾದ ದಿನದಂದು ನೋಡಿರುತ್ತೇನೆ ಎಂದು ಹೇಳುತ್ತಾರೆ. ಅಪಘಾತಪಡಿಸಿದವರು ಆರೋಪಿ ಎಂದು ಹಾಗೂ ಸದರಿ ವ್ಯಕ್ತಿ ನ್ಯಾಯಾಲಯದಲ್ಲಿ ಹಾಜರಿದ್ದಾನೆ ಎಂದರೆ ಸರಿ. ನನ್ನ ಗಂಡನಿಗೆ ಬಲಗೈ, ಬಲಗಾಲು, ಹಣೆ ಮತುತ ಭುಜಕ್ಕೆ ಭಾರಿ ರಕ್ತಗಾಯವಾಗಿರುತ್ತದೆ ಎಂದರೆ ಸರಿ. ನನ್ನ ಗಂಡನಿಗೆ ಯುನೈಟೆಡ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ ದಿ.13.05.2017 ರಂದು ಮೃತಪಟ್ಟಿರುತ್ತಾರೆ ನಾನು 14.05.2017 ರಂದು ಪುರವಣಿ ಹೇಳಿಕೆ ನೀಡಿರುತ್ತೆನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ. ಎಸ.ಎಸ್.ಸಿ ವಕೀಲರಿಂದ**

ಚಾಸಾ-15 ನನ್ನ ಬೀಗರು ಎಂದರೆ ಸರಿ. ಚಾಸಾ-15 ರವರು ಕಲಬುರಗಿಯಲ್ಲಿ ವಕಾಲತ್ತು ಮಾಡುತ್ತಾರೆ ಎಂದರೆ ಸರಿ. ಆರೋಪಿಯನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲೇ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಪಘಾತವಾದ ದಿನದಂದು ನಾನು ಆರೋಪಿಯನ್ನು ನೋಡಿರುತ್ತೇನೆ ಹಾಗೂ ಠಾಣೆಯಲ್ಲಿ ನೋಡಿರುತ್ತೇನೆ ಎಂದು ಹೇಳುತ್ತಾರೆ. ದಿ.14.05.2017 ರಂದು ನಾನು ಠಾಣೆಯಲ್ಲಿ ಆರೋಪಿಯನ್ನು ನೋಡಿರುತ್ತೇನೆ. ಪೋಲಿಸರು ನನ್ನನ್ನು ಠಾಣೆಗೆ ಆರೋಪಿಯನ್ನು ತೋರಿಸಲು ಕರೆದಿದ್ದರು. ಚಾಸಾ-1, 12, 13 ಮತ್ತು ನಾನು ಇದ್ದೇವು. ನನಗೆ ಸಮಯ ನೆನಪಿರುವುದಿಲ್ಲ. ಆರೋಪಿಯನ್ನು ಹೊರತು ಇನ್ನು ಎಷ್ಟು ಜನ ಇದ್ದರು ಎಂದು ಹೇಳಲು ಆಗುವುದಿಲ್ಲ. ಆರೋಪಿಯ ಪೂರ್ಣ ಹೆಸರು ರಾಘವೇಂದ್ರ ಮುಲಗೆ ಇರುತ್ತದೆ. ಆರೋಪಿ ಇವನೇ ಎಂದು ತೋರಿಸಿದ ನಂತರ ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಇದನ್ನು ಹೊರತು ನನ್ನಿಂದ ಬೇರೆ ಯಾವ ಹೇಳಿಕೆ ಪಡೆದಿರುವುದಿಲ್ಲ. ನಾನು ಅರೋಪಿಯನ್ನು ಘಟನೆ ನಡೆದ ದಿನದಂದೇ ನೋಡಿದ್ದೇನೆ ಎಂದು ಪೋಲಿಸರ ಮುಂದೆ ಹೇಳಿರುತ್ತೇನೆ. ಅಪಘಾತವನ್ನು ನಾನು ಕಣ್ಣಾರೇ ನೋಡಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿರುತ್ತದೆ ಆರೋಪಿ ತಪ್ಪಿನಿಂದ ಅಲ್ಲ ಎಂದರೆ ಸರಿಯಲ್ಲ. ದಿ.14.05.2017 ರಂದು ನಾನು ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು 7ನೇ ತರಗತಿವೆರೆಗ ಶಾಲೆ ಕಲಿತಿರುತ್ತೇನೆ. ನನ್ನ ತವರುಮನೆ ದುತ್ತರಗಾಂವ. ನಾನು ಕಡಗಂಚಿ ಶಾಲೆಯಲ್ಲಿ ಕಲಿತಿರುವುದಿಲ್ಲ. ದುತ್ತರಗಾಂವ ಹಾಗೂ ಕಡಗಂಚಿ ಅಕ್ಕಪಕ್ಕದ ಊರು ಎಂದರೆ ಸರಿ. ಆಳಂದ ಕಲಬುರಗಿ ರಸ್ತೆ ಉತ್ತರ ದಕ್ಷಿಣ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. ಕಾರು ಪಲ್ಟಿಯಾಗಿತ್ತು ಎಂದರೆ ಸರಿ. ಅಪಘಾತವಾದ ಕಾರು ಎನಡಿ ಪೆಟ್ರೊಲ ಬಂಕ ಕಡೆಗೆ ಪಲ್ಟಿಯಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಎನಡಿ ಪೆಟ್ರೊಲ ಬಂಕ ಪೂರ್ವ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಕಾರು ಯಾವ ದಿಕ್ಕಿಗೆ ಪಲ್ಟಿಯಾಗಿತ್ತು ಎಂದು ನಾನು ನೋಡಿರುವುದಿಲ್ಲ. ಕಾರಿನ ಯಾವ ಭಾಗಕ್ಕೆ ಜಖಂಗೊಂಡಿತ್ತು ಎಂದರೆ ಸಾಕ್ಷಿ ನಾನು ಗರ್ಭಿಣಿ ಇದ್ದ ಕಾರಣ ನಾನು ಆಟೋದಿಂದ ಕೆಳಗೆ ಇಳಿದಿರುವುದಿಲ್ಲ. ನನ್ನ ನೆಗೆಣ್ಣಿ ಆರೋಪಿಯನ್ನು ನನಗೆ ಆಟೋ ಒಳಗಿನಿಂದಲೇ ತೋರಿಸಿರುತ್ತಾಳೆ. ಅಪಘಾತವಾದ ಸ್ಥಳದಲ್ಲಿ ಸಾಕಷ್ಟು ಜನ ನೆರದಿದ್ದರು. ಆರೋಪಿ ಕಾರಿನ ಪಕ್ಕದಲ್ಲಿ ನಿಂತಿದ್ದನು ಎಂದು ಹೇಳುತ್ತಾರೆ. ಅಪಘಾತವಾದಾಗ ಕಾರ ಸುತ್ತಲು ಸಾಕಷ್ಟು ಜನ ಇದ್ದರು ಎಂದರೆ ಸರಿ. ನನ್ನ ನೆಗೆಣ್ಣಿ ಹೇಳಿದ ನಂತರವೇ ಆರೋಪಿ ಅಪಘಾತಪಡಿಸಿರುವುದು ಗೊತ್ತಾಗಿರುತ್ತದೆ ಎಂದರೆ ಸರಿ. ನಾವು ಕುಳಿತಿದ್ದ ಆಟೋದಿಂದ ಕಾರು 20-30 ಅಡಿ ಅಂತರದಲ್ಲಿ ಇತ್ತು. ನಾನು ಆಟೋದಲ್ಲಿ ಕುಳಿತಿದ್ದ ಕಾರಣ ಮತ್ತು ಅಲ್ಲಿ ಸಾಕಷ್ಟು ಜನ ಇದ್ದ ಕಾರಣ ಆರೋಪಿ ಇವನೇ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಹೋಗುತ್ತಿದ್ದ ವಾಹನದ ಮುಂದೆ ಒಂದು ಲಾರಿ ಹೊರಟಿತ್ತು ಅದನ್ನು ಓವರಟೇಕ ಮಾಡಲು ಹೋಗಿ ನನ್ನ ಗಂಡ ಬಂದು ಆರೋಪಿಯ ವಾಹನಕ್ಕೆ ಬಂದು ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಪರಿಹಾರ ಧನಕ್ಕಾಗಿ ಕಲಬುರಗಿ ನ್ಯಾಯಾಲಯದಲ್ಲಿ ಸಲಿಲಸಿದ ದಾವೆಯಲ್ಲಿ ನಾನು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.ಸಾಕ್ಷಿ ಹೇಳುವುದು ಇನ್ನು ಬಾಕಿ ಇದೆ ಎಂದು ಹೇಳುತ್ತಾರೆ. ಚಾಸಾ-15 ರವರೇ ಸದರಿ ಪರಿಹಾರ ಧನದ ದಾವೇನಡೆಸುತ್ತಾರೆ ಎಂದರೆ ಸರಿಯಲ್ಲ. ಪರಿಹಾರ ಧನಕ್ಕಾಗಿ ಚಾಸಾ-15 ರವರೇ ಬೇರೆ ವಕೀಲರಿಗೆ ದಾವೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಶ್ರೀಶೈಲರವರ ಸದರಿ ಅಪಘಾತ ನಡೆದಿದ್ದರೂ ಪರಿಹಾರಧನ ಪಡೆಯುವ ಸಲುವಾಗಿ ಚಾಸಾ-1 ರವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

**ಮರುವಿಚಾರಣೆ:- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ